# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬**

**ದಿನಾಂಕ: 19.01.2023 ರಂದು ಮಧ್ಯಾಹ್ನ 3:30 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 24ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ನಡಾವಳಿ.

| **ಉಪಸ್ಥಿತರು** | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಕಾಂಬ್ಳೆ ಅಶೋಕ**<br>ಡೀನ್ (ಶೈಕ್ಷಣಿಕ)<br>ಕರಾಮುವಿ, ಮೈಸೂರು | **ಡಾ. ಎ. ಖಾದರ್ ಪಾಷ**<br>ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು |
| **ಡಾ. ಕೆ.ಬಿ. ಪ್ರವೀಣ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. | |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>CIQA **ನಿರ್ದೇಶಕರು**<br>ಕರಾಮುವಿ, ಮೈಸೂರು. | **ಡಾ. ಮಹೇಶ ವಿ.**<br>**ವಿಶೇಷಾಧಿಕಾರಿ –** ಡೀನ್ (ಶೈಕ್ಷಣಿಕ)<br>ಕರಾಮುವಿ, ಮೈಸೂರು. |
| **ವಿವಿಧ ನಿಕಾಯಗಳ (ಸ್ಕೂಲ್) ಪ್ರಭಾರ ನಿರ್ದೇಶಕರು** | |
| **ಡಾ. ನಿರಂಜನ್ ರಾಜ್ ಎಸ್.** | ವಿಜ್ಞಾನ ನಿಕಾಯ |
| **ಡಾ. ಹೆಚ್. ರಾಜೇಶ್ವರಿ** | ನಿರ್ವಹಣಾಶಾಸ್ತ್ರ ನಿಕಾಯ |
| **ಡಾ. ಆರ್.ಹೆಚ್. ಪವಿತ್ರ** | ಸಮಾಜ ವಿಜ್ಞಾನ ನಿಕಾಯ |
| **ಡಾ. ಮಹೇಶ ವಿ.** | ವಾಣಿಜ್ಯ ನಿಕಾಯ |
| **ಅನುಪಸ್ಥಿತರು** | |
| **ಪ್ರೊ. ಎಂ. ರಾಮನಾಥಂ ನಾಯ್ಡು**<br>ಡೀನ್ (ಅಧ್ಯಯನ ಕೇಂದ್ರಗಳು),<br>ಕರಾಮುವಿ, ಮೈಸೂರು. | **ಡಾ. ಲಕ್ಷ್ಮೀ .ಎನ್**<br>ಶಿಕ್ಷಣ ನಿಕಾಯ |

ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಸಚಿವರು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮಾನ್ಯ ಕುಲಸಚಿವರು ಅಧ್ಯಕ್ಷರ ಸೂಚನೆಯಂತೆ 24ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ಕಾರ್ಯಸೂಚಿಯನ್ನು ವಿಷಯವಾರು ಸಭೆಯಲ್ಲಿ ಮಂಡಿಸಿದರು.

ಕುಲಸಚಿವರು                ಕುಲಪತಿಗಳು

**ವಿಷಯ ಸಂಖ್ಯೆ : 24.01**

**ವಿಷಯ:** 2022–23ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿವರಣಾ ಪುಸ್ತಕಗಳ ಅನುಮೋದನೆ ಕುರಿತು.

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ, 2022–23 ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪ್ರಕ್ರಿಯೆಯನ್ನು ತುರ್ತಾಗಿ ಪ್ರಾರಂಭಿಸುವ ಸಲುವಾಗಿ ಈ ಕೆಳಕಂಡ ಶೈಕ್ಷಣಿಕ ಕಾರ್ಯಕ್ರಮಗಳಾದ (ವಾರ್ಷಿಕ ಹಾಗೂ ಸೆಮಿಸ್ಟರ್) ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ನಿಯಾಮಾನುಸಾರ ಸಮಿತಿಯ ಸದಸ್ಯರು, ಪರೀಕ್ಷಾ ಮತ್ತು ಪ್ರವೇಶಾತಿ ವಿಭಾಗದಿಂದಲೂ ಪರಿಶೀಲಿಸಿ ತಿದ್ದುಪಡಿ ಮಾಡಿಸಿರುವ ವಿವರಣಾ ಪುಸ್ತಕಗಳನ್ನು ವಿವಿನಿಲಯದ ವೆಬ್‌ಸೈಟ್‌ನಲ್ಲಿ www.ksoumysuru.ac.in ನಲ್ಲಿ ಪ್ರಕಟಿಸುವ ಸಂಬಂಧ ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

1. B.A, B.Com, B.LIB.I.Sc, B.Sc – General, B.Sc – Information Technology, B.Sc – Home Science, B.B.A, B.C.A – Computer Applications
2. B.Ed.
3. M.A – Kannada, English, Hindi, Telugu, Urdu, Sanskrit, History, Economics, Political Science, Public Administration, Sociology, Journalism and Mass Communication, Ancient History & Archeology, Education.
4. M.Com
5. MBA
6. M.Sc. – Biochemistry, Biotechnology, Chemistry, Clinical Nutrition and Dietetics, Computer Science, Environmental Science, Geography, Mathematics, Microbiology, Physics, Psychology, Information Technology, Botany, Zoology, Food & Nutrition Science.

1. M.Lib.I.Sc
2. **Post Graduation Diploma Programmes:** PG Certificate in English (PGCDE), PG Certificate in Communicative English (PGCCE), PG Certificate Courses in Ambedkar Studies (PGCAS) PG Certificate in Human Resource Management (PGCHRM), PG Certificate in Financial Management (PGCFM), PG Certificate in Business Administration (PGCBA), PG Certificate in Marketing Management (PGCMM), PG Certificate in Nutrition and Dietetics (PGCND), PG Certificate in Journalism and Mass Communication (PGCJMC), PG Certificate in Kuvempu Sahithya (PGCKS), PG Certificate in Business Law (PGCBL), PG Certificate in Information Technology (PGCIT), PG Certificate in Computer Application (PGCCA)
3. **Diploma Programmes :** Diploma in Kannada (DIK), Diploma in Journalism (DIJ), Diploma in Nutrition and Health Education (DNHE), Diploma in Information Technology (DIT), Diploma in Computer Application (DCA), Diploma in Early Childhood Care and Education (DCCE).
4. **Certifiacte Programmes:** Under Graduate Certificate in Panchayath Raj (UGCPR), Under Graduate Certificate in Nutrition and Food (UGCNF), Under Graduate Certificate Programme in Information Communication Technology (UGCICT), Undergraduate Certificate Programme in English, Entreprunuership and Employment (UGCEEE)

**ತೀರ್ಮಾನ : 1.** ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ತುಂಬಾ ಕಡಿಮೆ ಇರುವುದರಿಂದ Undergraduate Certificate Programme in English, Entreprunuership and Employment (UGCEEE) **ಶೈಕ್ಷಣಿಕ ಕ್ರಮವನ್ನು ರದ್ದುಪಡಿಸಲಾಯಿತು. ಮುಂದುವರೆದು,** UGCEEE **ಹೊರತುಪಡಿಸಿ 2022–23ನೇ** ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ಅಪ್‌ಲೋಡ್ ಮಾಡಲು ಅನುಮೋದಿಸಲಾಯಿತು.

**2.** Undergraduate Certificate Programme in English, Entreprunuership and Employment (UGCEEE) **ವಿಷಯಕ್ಕೆ 2022–23ನೇ ಜುಲೈ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಸಲು ತೀರ್ಮಾನಿಸಲಾಯಿತು.**

ಕುಲಸಚಿವರು ಕುಲಪತಿಗಳು

3. **ವಿವರಣಾ ಪುಸ್ತಕದಲ್ಲಿ ಕನಿಷ್ಠ 20 ವಿದ್ಯಾರ್ಥಿಗಳ ಪ್ರವೇಶಾತಿ ಹೊಂದಿಲ್ಲದ ಶೈಕ್ಷಣಿಕ ಕ್ರಮವನ್ನು ರದ್ದುಪಡಿಸುವ ಅಥವಾ ಮುಂದುವರೆಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ ಎಂಬ ಮಾಹಿತಿಯನ್ನು ವಿವರಣಾ ಪುಸ್ತಕದಲ್ಲಿ ನಮೂದಿಸುವುದು ಸೂಕ್ತವೆಂದು ತೀರ್ಮಾನಿಸಲಾಯಿತು.**

*********

**ವಿಷಯ ಸಂಖ್ಯೆ: 24.02**

**ವಿಷಯ:** ಕರಾಮುವಿಯಲ್ಲಿ ನೂತನ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಕುರಿತು.

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಕೆಲವು ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಬಂಧ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಾಪಕರುಗಳ ಸಭೆ ಆಯೋಜಿಸಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಸಂಯೋಜನಾಧಿಕಾರಿಗಳು ಹಾಗೂ ಸದಸ್ಯರುಗಳನ್ನು ನೇಮಿಸಿದೆ. ಸದರಿ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಸಂಬಂಧ ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| **ಕ್ರಮ ಸಂಖ್ಯೆ** | **ಕಾರ್ಯಕ್ರಮದ ವಿವರ** | **ಸಂಯೋಜನಾಧಿಕಾರಿ/ಸದಸ್ಯರು** |
|---|---|---|
| 1 | M.Sc in Cyber Security | 1. Dr. D.N Bhavya - **Co ordinator**<br>2. Smt. Suneetha - **Member**<br>3. Dr. D.M Mahesha - **Member**<br>4. Dr. NaveenKumar C.G - **Member** |
| 2 | Master of Computer Application(MCA) | 1.Dr. Sumati Ramakrishna Gowda- **Co ordinator**<br>2. Dr. NaveenKumar C.G - **Member** |
| 3 | Bachelor of Social Work (BSW) | 1.Dr. Jadeesh Babu H.K **- Co ordinator**<br>2. Dr. Santhosh Naik - **Member**<br>3. Dr. Jayapal H.R - **Member**<br>4. Dr. Ramya - **Member** |
| 4 | Master of Social work (MSW) | |
| 5 | M.Sc in Earth Science | 1. Dr. Manjunath C.S - **Co ordinator**<br>2. Dr. Y.P Chandrashekar - **Member**<br>3. Dr. J.S Chandrashekar - **Member**<br>3. Dr. N.S Sathish Kumar – **Member**<br>4. Dr. Divya S - **Member** |
| 6 | M.Sc in Bio informatic Science | 1. Dr. Niranjan Raj **- Co ordinator**<br>2. Syed Baker - **Member**<br>3. Dr. Ravindra K.N **– Member**<br>4. Dr. Krishna Murthy - **Member** |
| 7 | M.Sc in Data Science | 1. Dr. Rashmi B.S - **Co ordinator**<br>2. Dr. Nandini - **Member**<br>3. Dr. V .Umesh - **Member** |

**ಚರ್ಚೆ:**

**CIQA** ನಿರ್ದೇಶಕರು ಮಾತನಾಡಿ ಮೇಲ್ಕಂಡ ನೂತನ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹೊಸದಾಗಿ ಪ್ರಾರಂಭಿಸುವ ಸಂಬಂಧ ಸಂಯೋಜನಾಧಿಕಾರಿಗಳು ಹಾಗೂ ಸದಸ್ಯರುಗಳನ್ನು ನೇಮಿಸಿದ್ದು, ಸದರಿ

ಕುಲಸಚಿವರು                                   ಕುಲಪತಿಗಳು

ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಬಗ್ಗೆ ಸೂಕ್ತ ಸಲಹೆ ಹಾಗೂ ಸೂಚನೆಗಳನ್ನು ಕೋರಿದರು. ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ **M.Sc Criminology, M.Sc Forenicic Science** ಕಾರ್ಯಕ್ರಮಗಳನ್ನು ಆರಂಭಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮಾನ್ಯ ಕುಲಪತಿಗಳು ಪ್ರವಾಸೋದ್ಯಮ ಮತ್ತು ಚಲನಚಿತ್ರ ವಿಷಯಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಕ್ರಮಗಳನ್ನು ಪ್ರಾರಂಭಿಸಬಹುದೆಂದು ತಿಳಿಸಿದರು.

**ತೀರ್ಮಾನ : 1.** Number of Programme Increase **ಮಾಡಿ ಸಭೆಗೆ ಮಂಡಿಸಿರುವ ಎಲ್ಲಾ** Programme **ಗಳನ್ನು ಪ್ರಾರಂಭಿಸಲು ಅನುಮೋದಿಸಲಾಯಿತು.**

**2. ಪ್ರಸ್ತುತ ಸಭೆಗೆ ಮಂಡಿಸಿರುವ ನೂತನ ಶೈಕ್ಷಣಿಕ ಕಾರ್ಯಕ್ರಮಗಳ ಜೊತೆಗೆ ಕೆಳಕಂಡ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಮತ್ತು ಈ ಸಂಬಂಧ ಸಂಯೋಜನಾಧಿಕಾರಿ ಯನ್ನು ನೇಮಿಸಿ ತೀರ್ಮಾನಿಸಲಾಯಿತು.**

| | | |
|---|---|---|
| 1 | M.Sc Criminology | Prof. K.B. Praveena, Co-ordinator |
| 2 | M.Sc Forensic Science | |
| 3 | M.A Folklore | |
| 4 | B.B.A | Dr. Rajeshwari Co-ordinator |
| 5 | Yoga | |
| 6 | Tourisum and Management | Dr. Shalva Pille Iyengar, Co-ordinator |

*******

**ವಿಷಯ ಸಂಖ್ಯೆ: 24.03**

ವಿಷಯ: 2022–23ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ನಡೆಯಲಿರುವ ಎಂ.ಬಿ.ಎ.ಗೆ ಪ್ರವೇಶಾತಿ ಪಡೆಯಲಿರುವ ವಿದ್ಯಾರ್ಥಿಗಳಿಗೆ Online ಮೂಲಕ ಪ್ರವೇಶ ಪರೀಕ್ಷೆ ನಡೆಸುವ ಬಗ್ಗೆ.

* * * *

2022–23ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ನಡೆಯಲಿರುವ ಎಂ.ಬಿ.ಎ.ಗೆ ಪ್ರವೇಶಾತಿ ಪಡೆಯಲಿರುವ ವಿದ್ಯಾರ್ಥಿಗಳಿಗೆ Online ಮೂಲಕ ಪ್ರವೇಶ ಪರೀಕ್ಷೆ ನಡೆಸುವ ಕುರಿತು ವಿಭಾಗೀಯ ಸಮಿತಿ ಸಭೆಯಲ್ಲಿ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ನಿರ್ಧರಿಸಿ ದಿ:18–01–2023ರಿಂದ ಪ್ರವೇಶಾತಿ ಪ್ರಾರಂಭಿಸಲಾಗಿದೆ. ಈ ಸಂಬಂಧ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ : 2022–23ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ನಡೆಯಲಿರುವ ಎಂ.ಬಿ.ಎ.ಗೆ ಪ್ರವೇಶಾತಿ ಪಡೆಯಲಿರುವ ವಿದ್ಯಾರ್ಥಿಗಳಿಗೆ Online ಮೂಲಕ ಪ್ರವೇಶ ಪರೀಕ್ಷೆ ನಡೆಸುವ ಬಗ್ಗೆ ಅನುಮೋದಿಸಲಾಯಿತು.**

*******

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 24.04**

**ವಿಷಯ: Department Council ಸಭಾ ನಡಾವಳಿ ಅನುಮೋದನೆ ಮತ್ತು ವಿದ್ಯಾರ್ಥಿಗಳಿಗೆ ಮುದ್ರಿತ ಸಿದ್ಧಪಾಠಗಳನ್ನು ನೀಡುವ ಬಗ್ಗೆ.**

******

ದಿನಾಂಕ: 17.11.2022 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರ ಸಭೆಯಲ್ಲಿ, ವಿವಿಧ ಅಧ್ಯಯನ ವಿಭಾಗಗಳ ಅಧ್ಯಕ್ಷರು ಹೆಚ್ಚಿನ ವಿದ್ಯಾರ್ಥಿಗಳು ಮುದ್ರಿತ ಸಿದ್ಧಪಾಠಗಳನ್ನು ವಿತರಿಸುವಂತೆ ಕೋರುತ್ತಿರುವುದಾಗಿ ತಿಳಿಸಿರುತ್ತಾರೆ. ವಿದ್ಯಾರ್ಥಿಗಳಿಗೆ ಮುದ್ರಿತ ಸಿದ್ಧಪಾಠಗಳನ್ನು ನೀಡುವುದರಿಂದ ಪ್ರವೇಶಾತಿ ಸಂಖ್ಯೆಯು ಸಹ ಹೆಚ್ಚುವುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಪ್ರಸ್ತುತ, ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಅಧ್ಯಾಪಕರ Department Council Meeting ಅನ್ನು ನಡೆಸಿ ವಿದ್ಯಾರ್ಥಿಗಳಿಗೆ ಮುದ್ರಿತ ಸಿದ್ಧಪಾಠಗಳನ್ನು ನೀಡುವ ಬಗ್ಗೆ ತೀರ್ಮಾನ ಕೈಗೊಂಡ ಸಭಾ ನಡಾವಳಿಯನ್ನು ಡೀನ್ (ಶೈಕ್ಷಣಿಕ) ವಿಭಾಗಕ್ಕೆ ಸಲ್ಲಿಸಿರುತ್ತಾರೆ. ತೀರ್ಮಾನಗಳನ್ನು ಕ್ರೋಢೀಕರಿಸಿ ಪಟ್ಟಿ ಮಂಡಿಸಿದೆ. (ಬಾವುಟ–ಅ).

ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ Department Council Meeting ಅನ್ನು ನಡೆಸಿ ಸಭಾ ನಡಾವಳಿಯನ್ನು ಸಲ್ಲಿಸಿರುತ್ತಾರೆ (ಬಾವುಟ–ಆ). ಇವುಗಳನ್ನು ಶೈಕ್ಷಣಿಕ ಮಂಡಳಿ ಗಮನಕ್ಕೆ ತರುತ್ತಾ ವಿದ್ಯಾರ್ಥಿಗಳಿಗೆ ಮುದ್ರಿತ ಸಿದ್ಧಪಾಠಗಳನ್ನು ವಿತರಿಸುವ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ಚರ್ಚೆ:**

ಡೀನ್ (ಶೈಕ್ಷಣಿಕ) ರವರು ಮಾತನಾಡಿ ವಿದ್ಯಾರ್ಥಿಗಳಿಂದ ಮುದ್ರಿತ ಸಿದ್ಧಪಾಠಕ್ಕೆ ಹೆಚ್ಚು ಬೇಡಿಕೆ ಇರುವುದಾಗಿ ತಿಳಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ ವಿದ್ಯಾರ್ಥಿಗಳಿಗೆ ಮುದ್ರಿತ ಸಿದ್ಧಪಾಠಗಳನ್ನು ನೀಡುವುದರಿಂದ ಮುದ್ರಿತ ವೆಚ್ಚವು ಹೆಚ್ಚಾಗುವುದನ್ನು ಮನಗಂಡು ಮುಂದಿನ ಸಾಲುಗಳಿಂದ ಪ್ರವೇಶಾತಿ ಶುಲ್ಕವನ್ನು ಹೆಚ್ಚಿಸುವ ಬಗ್ಗೆ ಪ್ರಸ್ತಾಪಿಸಲಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಪ್ರವೇಶಾತಿ ಶುಲ್ಕ ಹೆಚ್ಚಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ತೀರ್ಮಾನ :**
1. **Department Council ಸಭಾ ನಡಾವಳಿಯನ್ನು ಅನುಮೋದಿಸಲಾಯಿತು. ಮುಂದುವರೆದು, ವಿದ್ಯಾರ್ಥಿಗಳಿಗೆ ಮುದ್ರಿತ ಸಿದ್ಧಪಾಠಗಳನ್ನು ನೀಡುವ ತೀರ್ಮಾನಿಸಲಾಯಿತು.**
2. **2023–24ನೇ ಜುಲೈ ಆವೃತ್ತಿಯಿಂದ ಪ್ರವೇಶಾತಿ ಶುಲ್ಕವನ್ನು ಹೆಚ್ಚಿಸುವ ಬಗ್ಗೆ ತೀರ್ಮಾನಿಸಲಾಯಿತು.**

*******

**ವಿಷಯ ಸಂಖ್ಯೆ: 24.05**

**Subject:** Proposal to make approval of II, III & IV Semester M.Sc. Syllabus, I to VI Semester B.Sc. Syllabus and Ph.D. Coursework Syllabus in Environmental Science.

******

With reference to the above, Board of Studies in Environmental Science has approved B.Sc., M.Sc. and Ph.D. Coursework in Environmental Science.

Hence, the above matter shall be placed in coming Academic Council meeting.

**ತೀರ್ಮಾನ : ಅನುಮೋದಿಸಲಾಯಿತು.**

*******

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 24.06**

**Subject:** AC Subject - Proposal to make provision to select Environmental Science in B.Sc. with other combinations

*****

With reference to the above, in the **Bachelor's Degree (B.Sc.,)** only few students are admitted by opting Environmental Science as one of the optional Subject as per the university criteria i.e. Chemistry- Zoology- Environmental Science and Biochemistry- Zoology- Environmental Science only for these two combination only. Therefore, student's admission for above said combination is very limited, even in the single digit.

Hence, it is proposed before the Academic Council to give more options to students to choose Environmental Science subject as a Optional with other combinations such as :

1. **CBEs:** Chemistry, Botany, Environmental Science
2. **CZEs:** Chemistry, Zoology and Environmental Science
3. **CMEs:** Chemistry, Microbiology and Environmental Science
4. **BBEs:** Botany, Biochemistry, Environmental Science
5. **BMEs:** Botany, Microbiology, Environmental Science
6. **BZEs:** Botany, Zoology and Environmental Science

Hence, the above matter shall be placed in the coming Academic Council meeting.

**ತೀರ್ಮಾನ : ಅನುಮೋದಿಸಲಾಯಿತು.**

*******

**ವಿಷಯ ಸಂಖ್ಯೆ : 24.07**

**ವಿಷಯ: ಕರಾಮುವಿಯ 22 ಸಹಾಯಕ ಪ್ರಾಧ್ಯಾಪಕರಲ್ಲಿ (ಮೂವರನ್ನು ಹೊರತುಪಡಿಸಿ) 06 ಸಹಾಯಕ ಪ್ರಾಧ್ಯಾಪಕರುಗಳು ವಿಭಾಗವಾರು ನಡೆಸಿರುವ ಪಿಹೆಚ್.ಡಿ. ಮಾರ್ಗದರ್ಶಕರುಗಳನ್ನಾಗಿ ಮಾಡುವ ಪಿ.ಜಿ. ಬಿ.ಓ.ಎಸ್. ಸಭೆಯ ತೀರ್ಮಾನದ ನಡಾವಳಿಯನ್ನು ಡೀನ್(ಶೈಕ್ಷಣಿಕ) ವಿಭಾಗಕ್ಕೆ ಸಲ್ಲಿಸಿರುವ ಬಗ್ಗೆ.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 22 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿದ್ದು, ಸದರಿ ಪ್ರಾಧ್ಯಾಪಕರುಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದ್ದು, ದಿನಾಂಕ: 06–12–2022ರ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳಲ್ಲಿ ಚರ್ಚಿತವಾದ ವಿಷಯದಲ್ಲಿ ಈ 22 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಪಿಹೆಚ್.ಡಿ.

ಕುಲಸಚಿವರು ಕುಲಪತಿಗಳು

ಮಾರ್ಗದರ್ಶಕರುಗಳನ್ನಾಗಿ ಮಾಡುವ ಬಗ್ಗೆ ತೀರ್ಮಾನ ಕೈಗೊಂಡಿದ್ದು, ಅದರಲ್ಲಿ ಕೆಲವು ಅಧ್ಯಯನ ಮತ್ತು ಸಂಶೋಧನಾ ವಿಭಾಗವಾರು ಸಹಾಯಕ ಪಾಧ್ಯಾಪಕರುಗಳಲ್ಲಿ ಇತ್ತೀಚೆಗೆ ಪಿಹೆಚ್.ಡಿ. ಕಾರ್ಯಕ್ರಮಗಳನ್ನು ಮುಗಿಸಿಕೊಂಡಿದ್ದು, ಅವರುಗಳನ್ನು ಪಿಹೆಚ್.ಡಿ. ಮಾರ್ಗದರ್ಶಕರುಗಳನ್ನಾಗಿ ಮಾಡುವ ಸಂಬಂಧ ವಿಭಾಗವಾರು ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಯಲ್ಲಿ ಮಂಡಿಸಿ ಕೈಗೊಂಡ ತೀರ್ಮಾನಗಳ ನಡಾವಳಿಗಳನ್ನು ಡೀನ್(ಶೈಕ್ಷಣಿಕ)ರವರ ವಿಭಾಗಕ್ಕೆ ಸಲ್ಲಿಸಿರುತ್ತಾರೆ. ವಿವರಗಳು ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಹೆಸರು | ಪದನಾಮ | ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಷರಾ |
|---|---|---|---|---|
| 1. | ಡಾ. ಶ್ರೀಕಾಂತ್ .ಎಸ್ | ಸಹಾಯಕ ಪ್ರಾಧ್ಯಾಪಕ | ಇಂಗ್ಲೀಷ್ | ದಿನಾಂಕ: 12–07–2021ರ ಇಂಗ್ಲೀಷ್ ಪಿ.ಜಿ. ಬಿ.ಓ.ಎಸ್. ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುತ್ತಾರೆ. |
| 2. | ಡಾ. ಎ.ಎಸ್. ಮಧುರಾ | ಸಹಾಯಕ ಪ್ರಾಧ್ಯಾಪಕ | ಇಂಗ್ಲೀಷ್ | ದಿನಾಂಕ: 19–02–2020ರ ಇಂಗ್ಲೀಷ್ ಪಿ.ಜಿ. ಬಿ.ಓ.ಎಸ್. ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುತ್ತಾರೆ. |
| 3. | ಡಾ. ಜಾಹ್ನವಿ | ಸಹಾಯಕ ಪ್ರಾಧ್ಯಾಪಕ | ಕಾನೂನು ವಿಭಾಗ ಎಲ್.ಎಲ್.ಎಂ. ಕೋರ್ಸ್ ಇಲ್ಲದ ಕಾರಣ ತಾತ್ಕಾಲಿಕವಾಗಿ ರಾಜ್ಯಶಾಸ್ತ್ರ ವಿಭಾಗಕ್ಕೆ ಸೇರ್ಪಡೆಯಾಗಿರುತ್ತದೆ. | ಎಲ್.ಎಲ್.ಎಂ ಕೋರ್ಸ್ ಇಲ್ಲದ ಕಾರಣ ತಾತ್ಕಾಲಿಕವಾಗಿ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಸೇರ್ಪಡೆಯಾಗಿದ್ದು, ದಿನಾಂಕ: 07–01–2023ರಂದು ರಾಜ್ಯಶಾಸ್ತ್ರ ಪಿ.ಜಿ. ಬಿ.ಓ.ಎಸ್. ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುತ್ತಾರೆ. |
| 4. | ಡಾ. ರಮ್ಯ .ಎಸ್ | ಸಹಾಯಕ ಪ್ರಾಧ್ಯಾಪಕ | ಸಮಾಜಶಾಸ್ತ್ರ | ದಿನಾಂಕ: 30–12–2020ರ ಸಮಾಜಶಾಸ್ತ್ರ ಪಿ.ಜಿ. ಬಿ.ಓ.ಎಸ್. ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು (**Already AC meeting approval)** |
| 5. | ಡಾ. ನಂದಿನಿ | ಸಹಾಯಕ ಪ್ರಾಧ್ಯಾಪಕ | ಮಾಹಿತಿ ವಿಜ್ಞಾನ | ದಿನಾಂಕ: 05–01–2023ರ ಮಾಹಿತಿ ವಿಜ್ಞಾನ ಪಿ.ಜಿ. ಬಿ.ಓ.ಎಸ್. ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುತ್ತಾರೆ. |
| 6. | ಡಾ. ಭವ್ಯ | ಸಹಾಯಕ ಪ್ರಾಧ್ಯಾಪಕ | ಗಣಕಯಂತ್ರ ವಿಜ್ಞಾನ | ದಿನಾಂಕ: 21–12–2022ರ ಗಣಕಯಂತ್ರ ವಿಜ್ಞಾನ ಪಿ.ಜಿ. ಬಿ.ಓ.ಎಸ್. ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುತ್ತಾರೆ. |

ಈ ಮೇಲ್ಕಂಡ ವಿಷಯವನ್ನು ಮುಂಬರುವ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ವಿಷಯವನ್ನು ಮಂಡಿಸಲಾಗಿದೆ.

**ತೀರ್ಮಾನ :** **ಈ ಹಿಂದೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡ ಸಹಾಯಕ ಪ್ರಾಧ್ಯಾಪಕರಿಗೆ ಇದುವರೆಗೆ Guideship ನೀಡದೆ ಇರುವ ವಿಚಾರವನ್ನು ಚರ್ಚಿಸಲಾಯಿತು. ತಾತ್ಕಾಲಿಕವಾಗಿ ನೇಮಕಗೊಂಡು ಖಾಯಂಗೊಳಿಸಲಾದ ಅಧ್ಯಾಪಕರಿಗೆ Guideship ನೀಡುವ ಸಂಬಂಧ ಡಾ. ಕಾಂಬ್ಳೆ ಅಶೋಕ, ಡೀನ್ (ಶೈಕ್ಷಣಿಕ) ರವರ ಅಧ್ಯಕ್ಷತೆಯಲ್ಲಿ ಡಾ. ಎಸ್. ನಿರಂಜನ್ ರಾಜ್, CIQA ನಿರ್ದೇಶಕರು ಮತ್ತು ಡಾ. ಆರ್.ಹೆಚ್. ಪವಿತ್ರ, ನಿರ್ದೇಶಕರು, ಸಮಾಜ ವಿಜ್ಞಾನ ನಿಕಾಯ ರವರುಗಳ ಸಮಿತಿಯನ್ನು ರಚಿಸಿ ಸದರಿ ಸಮಿತಿಯು ಕೂಲಂಕುಷವಾಗಿ ಸರ್ಕಾರದ ಪತ್ರಗಳು, ಕಾನೂನು ಅಡೆತಡೆಗಳು ಮತ್ತು ನಿಯಮಗಳನ್ನು ಪರಿಶೀಲಿಸಿ ವರದಿಯನ್ನು ನೀಡುವುದು. ವರದಿಯನ್ನಾಧರಿಸಿ ನಿಯಮಾನುಸಾರ ಕ್ರಮಕೈಗೊಳ್ಳುವುದೆಂದು ತೀರ್ಮಾನಿಸಿ ವಿಷಯವನ್ನು ಮುಂದೂಡಲಾಯಿತು.**

*******

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ : 24.08**

**ವಿಷಯ:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲ್ಪಟ್ಟಿರುವ NEP ಘಟಕದ ಭಾಗವಾಗಿ NCC ಯನ್ನು ಐಚ್ಛಿಕ ವಿಷಯವಾಗಿ ಅನುಷ್ಠಾನಗೊಳಿಸಿ ಸೇರ್ಪಡಿಸುವ ಕುರಿತು

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳುವ ಸಂಬಂಧ ಈಗಾಗಲೇ National Education Policy(NEP) ಘಟಕ ಸ್ಥಾಪನೆಗೊಂಡಿರುವ ಅಂಶವನ್ನು ಅವಗಾಹನೆಗೆ ತರುತ್ತಾ Air Commodore B S Kanwar, VSM (Deputy Director General), Bengaluru ಇವರು ದಿನಾಂಕ:17–01–2023 ರ ಪತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಈಗಾಗಲೇ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಆಹಾರ, ಆರೋಗ್ಯ ಹಾಗೂ ಯೋಗ ವಿಷಯಗಳನ್ನು ಐಚ್ಛಿಕ ವಿಷಯವಾಗಿ ಅನುಷ್ಠಾನಗೊಳಿಸಿ ಸೇರ್ಪಡೆಗೊಳಿಸಿದೆ ಎಂಬ ಮಾಹಿತಿಯೊಂದಿಗೆ ಕರಾಮುವಿಯ NEP ಘಟಕದ ಭಾಗವಾಗಿ ಕೆಲವು ಶೈಕ್ಷಣಿಕ ವಿಧಾನಗಳೊಂದಿಗೆ NCCಯನ್ನು ಐಚ್ಛಿಕ ವಿಷಯವಾಗಿ ಅನುಷ್ಠಾನಗೊಳಿಸಿ ಸೇರ್ಪಡಿಸುವಂತೆ ತಿಳಿಸಿ ಸದರಿ ವಿಷಯದ ಮಾದರಿ ಪಠ್ಯಕ್ರಮಗಳನ್ನು ಲಗತ್ತಿಸಿ ಮನವಿ ಪತ್ರ ಸಲ್ಲಿಸಿರುತ್ತಾರೆ. ಈ ಸಂಬಂಧವಾಗಿ ಸದರಿ ವಿಷಯದ ಕುರಿತು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :** **ವಿವಿ ನಿಲಯದಲ್ಲಿ NEP ಯನ್ನು ಅಳವಡಿಸಿಕೊಂಡ ನಂತರದಲ್ಲಿ ಕ್ರಮವಹಿಸುವುದೆಂದು ತೀರ್ಮಾನಿಸಿ ವಿಷಯವನ್ನು ಮುಂದೂಡಲಾಯಿತು.**

*******

**<u>ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿತವಾದ ಇತರೆ ವಿಷಯಗಳು</u>**

**ವಿಷಯ ಸಂಖ್ಯೆ: 24.09**

**ವಿಷಯ**: ಮಾಹಿತಿ ತಂತ್ರಜ್ಞಾನ ವಿಭಾಗದ Composite BOS ಮಂಡಳಿಯ B.Sc IT II Year lateral entry ವಿಷಯ ಅನುಮೋದನೆ ನೀಡುವ ಬಗ್ಗೆ.

* * * * *

ಡಿಪ್ಲೋಮ ಪದವೀಧರರಿಗೆ BSc Information Technology ಎರಡನೇ ವರ್ಷಕ್ಕೆ (III Semster) ನೇರ ಪ್ರವೇಶಾತಿ ನೀಡುವಂತೆ ದಿನಾಂಕ 05–01–2023 ರಂದು ನಡೆದ Composite BOS ಸಭೆಯಲ್ಲಿ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಪ್ರಸ್ತುತ 2022–23 January Cycle ಹಾಗೂ ತದನಂತರ ನಡೆಯುವ ಪ್ರವೇಶಾತಿಯಲ್ಲಿ ಇದನ್ನು ಕಾರ್ಯರೂಪಕ್ಕೆ ತರುವುದರಿಂದ BSc IT prospectus ನಲ್ಲಿ ಕೆಳಗೆ ಸೂಚಿಸಿರುವ ಮಾಹಿತಿಯನ್ನು ಅಳವಡಿಸಕೊಳ್ಳಬೇಕೆಂದು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

B.Sc. Information Technology (CBCS Scheme)
Eligibility Criteria

The student should have passed Class XII in the Science stream from any recognized board.

a) II PUC Science (Mathematics/Statistics/Accountancy as one of subject) passed from Karnataka State Pre University Board.
b) XII passed in Science combinations from CBSE/ICSE/HSC Boards.

ಕುಲಸಚಿವರು ಕುಲಪತಿಗಳು

c) II PUC/+2/12th standard passed in science stream from other State recognized boards.
d) Any other examinations in science stream considered as equivalent there to.

**<u>Proposed : Lateral Entry to B.Sc IT II Year</u>**

a) Candidates who have studied three years Diploma (Polytechnic / Diploma (CS/IT/EC/EE/IS) programme or equivalent or candidates who have successfully completed three years Polytechnic/Diploma with Mathematics as one of the Subjects)

**ತೀರ್ಮಾನ :** **ಮಾಹಿತಿ ತಂತ್ರಜ್ಞಾನ ವಿಭಾಗದ Composite BOS ಮಂಡಳಿಯ B.Sc IT II Year lateral entry ವಿಷಯವನ್ನು ಅನುಮೋದಿಸಲಾಯಿತು.**

*******

**ವಿಷಯ ಸಂಖ್ಯೆ: 24.10**

**ವಿಷಯ :** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಭಾಷಾಂತರ ವಿಭಾಗವನ್ನು ಸ್ಥಾಪಿಸುವ ಬಗ್ಗೆ.

**ಉಲ್ಲೇಖ :** 1. ಸಂಖ್ಯೆ : ಕರಾಮುವಿ/ಡೀನ್(ಶೈ)–01/2021–22, ದಿನಾಂಕ : 23–07–2021.
2.ಸಂಖ್ಯೆ : ಕರಾಮುವಿ/ಆವಿ/ಜಿಎಲ್–2/687/2021–22, ದಿನಾಂಕ : 29.09.2021.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಭಾಷಾಂತರ ವಿಭಾಗವನ್ನು ಸ್ಥಾಪಿಸಿ, ಸದರಿ ಭಾಷಾಂತರ ವಿಭಾಗಕ್ಕೆ ಸಂಯೋಜನಾಧಿಕಾರಿಯನ್ನಾಗಿ ಡಾ. ಚಂದ್ರೇಗೌಡ .ಎನ್.ಆರ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಮತ್ತು ಸಹಾಯಕ ಸಂಯೋಜನಾಧಿಕಾರಿಯನ್ನಾಗಿ ಡಾ. ವಿಜಯ ಕುಮಾರ್ ಎ.ವೈ, ಸಹಾಯಕ ಭಾಷಾಂತರಕಾರರು, ಇವರುಗಳನ್ನು ನೇಮಿಸಿ, ಭಾಷಾಂತರ ವಿಭಾಗವನ್ನು ಸ್ಥಾಪಿಸುವ ಸಂಬಂಧ ಶೈಕ್ಷಣಿಕ ಮಂಡಳಿಯ ಅನುಮೋದನೆ ಪಡೆಯುವ ನಿಟ್ಟಿನಲ್ಲಿ ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :** **ಯು.ಜಿ.ಸಿ. ವೆಬ್‌ಸೈಟ್ ಅನ್ನು ಪರಿಶೀಲಿಸಿ ಸಾಧಕ ಬಾಧಕಗಳ ಬಗ್ಗೆ ಪರಾಮರ್ಶಿಸಲು ತಿಳಿಸಿ ವಿಷಯವನ್ನು ಅನುಮೋದಿಸಲಾಯಿತು.**

*******

**ವಿಷಯ ಸಂಖ್ಯೆ: 24.11**

**ವಿಷಯ :** Academic and Administrative External Audit Report ಬಗ್ಗೆ

****

AAA Committee ರವರು ಸಿದ್ಧಪಡಿಸಿರುವ Academic and Administrative External Audit Report ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗಾಗಿ CIQA ನಿರ್ದೇಶಕರು ವಿಷಯವನ್ನು ಮಂಡಿಸಿ ಸಭೆಯ ಅನುಮೋದನೆ ಕೋರಿದರು.

**ತೀರ್ಮಾನ :** AAA Committee ರವರು ಸಿದ್ಧಪಡಿಸಿರುವ Academic and Administrative External Audit Report ಅನ್ನು ಅನುಮೋದಿಸಲಾಯಿತು.

*******

ಕುಲಸಚಿವರು ಕುಲಪತಿಗಳು

ಅಂತಿಮವಾಗಿ 24ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಹಾಗೂ ಅಧ್ಯಕ್ಷರಿಗೆ ಡೀನ್ (ಶೈಕ್ಷಣಿಕ) ರವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು